**OS 07/2021**

**ಪಿಡಬ್ಲ್ಯೂ: 1**

**ದಿಃ 06-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ ಶ್ರೀ. ಎಂ ಟಿ ಎಸ್ 5 ಮತ್ತು 7 ನೇ ಪ್ರತಿವಾದಿಗಳ ಪರ ವಕೀಲರಿಂದಃ**

ನನ್ನ ತಂದೆ ಮರಣ ಹೊಂದಿದ 3-4 ತಿಂಗಳ ನಂತರ ನನ್ನ ತಂದೆ ಬರೆದ ಮರಣ ಶಾಸನ ಪತ್ರಗಳ ಬಗ್ಗೆ ನನ್ನ ಗಮನಕ್ಕೆ ಬಂದಿತ್ತು. ನನ್ನ ತಂದೆ ಬರೆದ ಮರಣ ಶಾಸನ ಪತ್ರಗಳನ್ನು ಅವರು ಕಾಪಾಡಿದ ಪೆಟ್ಟಿಗೆಯಲ್ಲಿ ಇಟ್ಟಿದ್ದರು. ನನ್ನ ತಂದೆ ಕಾಪಾಡಿದ್ದ ಪೆಟ್ಟಿಗೆ ತೆಗೆದು ನೋಡಿದಾಗ ಅದರಲ್ಲಿ ಎರಡು ಮರಣ  ಶಾಸನ ಪತ್ರಗಳನ್ನು ನೋಡಿದ್ದು ಉಳಿದ ಯಾವುದೇ ದಾಖಲೆಗಳನ್ನು ನೋಡಿಲ್ಲ. ನನ್ನ ತಂದೆ ಮರಣ ಹೊಂದುವವರೆಗೆ ನನ್ನ ತಂದೆಯ ದಾಖಲೆಗಳನ್ನು ನಾನು ನೋಡಿಲ್ಲ. ಆ ಕಾರಣ ನನ್ನ ತಂದೆ ಜೀವಂತ ಇದ್ದಾಗ ಯಾವ ಯಾವ ಆಸ್ತಿಗಳ ಬಗ್ಗೆ ಯಾವ ದಾಖಲೆಗಳನ್ನು ಬರೆದು ಕೊಟ್ಟಿದ್ದಾರೆಂಬ ಬಗ್ಗೆ ನನಗೆ ಮಾಹಿತಿ ಇದ್ದಿರಲಿಲ್ಲ ಎಂದರೆ ಸರಿ.

ನನ್ನ ತಂದೆ ನನ್ನ ಮಗನ ಹೆಸರಿಗೆ ಬರೆದ ದಾನ ಪತ್ರವನ್ನು ನಾನು ನನ್ನ ತಂದೆ ಮರಣ ಹೊಂದಿದ ಎಷ್ಟು ದಿನಗಳ ನಂತರ ನೋಡಿದ್ದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮರಣ ಹೊಂದಿದ ನಂತರ ಎಲ್ಲ ದಾಖಲೆಗಳು ನನಗೆ ಸಿಕ್ಕಿದ್ದವು ಎಂದರೆ ಸರಿ. ನಾನು ಎರಡು ಮರಣ ಶಾಸನ ಪತ್ರಗಳನ್ನು ನೋಡಿದ್ದು ಬೇರೆ ಮರಣ ಶಾಸನ ಪತ್ರಗಳು ಇಲ್ಲ. ದಾನ ಪತ್ರ ಮತ್ತು ಮರಣ ಶಾಸನ ಪತ್ರಗಳನ್ನು ಓದಿಕೊಂಡಿದ್ದೇನೆ. ನಾನು ನೋಡಿದ ದಾನ ಪತ್ರ ಮತ್ತು ಮರಣ ಶಾಸನ ಪತ್ರಗಳಲ್ಲಿ ನನ್ನ ತಂದೆ ತನ್ನ ಎಲ್ಲಾ ಮಕ್ಕಳ ಹೆಸರುಗಳನ್ನು ಏಕೆ ಕಾಣಿಸಿಲ್ಲ ಎಂಬ ಬಗ್ಗೆ ಕಾರಣ ತಿಳಿಸಿಲ್ಲ.

5 ಮತುತ 7 ನೇ ಪ್ರತಿವಾದಿಗಳು ಸಲ್ಲಿಸಿದ ಕೌಂಟರ್ ಕ್ಲೇಮು ಪತ್ರಗಳಲ್ಲಿ ಯಾವ ಯಾವ ಆಸ್ತಿಗಳನ್ನು ಸೇರಿಸಿದ್ದಾರೆಂದು ಹೇಳಲಾಗುವುದಿಲ್ಲ.  2008 ರಲ್ಲಿ ನನ್ನ ತಂದೆಗೆ ಅಂದಾಜು 80-85 ವರ್ಷ  ವಯಸ್ಸು ಆಗಿತ್ತು ಎಂದರೆ ಸರಿ. 2008 ರಲ್ಲಿ ನನ್ನ ತಂದೆಗೆ ವಯಸ್ಸಾಗಿದ್ದ ಕಾರಣ ಸ್ವತಂತ್ರವಾಗಿ ನಡೆದಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣ ನನ್ನ ತಂದೆ ಎಲ್ಲಿಗಾದರೂ ಹೋಗಬೇಕಾದರೆ ನನ್ನ ಮತ್ತು ನನ್ನ ಹೆಂಡತಿಯ ಮೇಲೆ ಅವಲಂಬಿತರಾಗಿದ್ದರು ಎಂದರೆ ಸರಿಯಲ್ಲ. 2018 ರಲ್ಲಿ ನನ್ನ ತಂದೆಗೆ 90 ಕ್ಕೂ ಹೆಚ್ಚಿಗೆ ವಯಸ್ಸಾಗಿದ್ದ ಕಾರಣ ಅವರ ಮಾನಸಿಕ ಸ್ಥಿತಿ ಇರಲಿಲ್ಲ ಎಂದರೆ

ಸರಿಯಲ್ಲ. ದಿಃ07-01-2019 ಮತ್ತು ದಿಃ01-10-2018 ರ ಲ್ಲಿ ಬರೆದಿದ್ದಾರೆ ಎನ್ನಲಾದ ನನ್ನ, ನನ್ನ ಹೆಂಡತಿ ಮತ್ತು ಮಕ್ಕಳ ಚಿತಾವಣೆಯ ಮೇಲೆ ಸೃಷ್ಠಿಸಿದ ದಾಖಲೆಗಳು ಎಂದರೆ ಸರಿಯಲ್ಲ. ದಿಃ07-01-2019 ಮತ್ತು ದಿಃ01-10-2018 ರ ಮರಣ ಶಾಸನ ಪತ್ರಗಳನ್ನು ಬರೆಯಲು ನನ್ನ ತಂದೆಗೆ ಯಾವುದೇ ಮಾನಸಿಕ ಸ್ಥಿತಿ ಇದ್ದಿರಲಿಲ್ಲ ಎಂದರೆ ಸರಿಯಲ್ಲ. ನಿಪಿ 4 ಮತ್ತು 6 ರ ದಾಖಲೆ ನನ್ನ ಬಳಿ ಇದ್ದವೇ ಎಂದರೆ ಸಾಕ್ಷಿ ತನ್ನ ದಾಖಲೆ ತನ್ನ ಬಳಿ, ತನ್ನ ತಂದೆಯ ದಾಖಲೆ ತನ್ನ ತಂದೆಯ ಬಳಿ ಇದ್ದವು ಎಂದು ನುಡಿಯುತ್ತಾರೆ. ನಿಪಿ 11 ರ ದಾಖಲೆಯನ್ನು ನಾನು ಮತ್ತು ಪ್ರತಿವಾದಿಗಳು ಪಡೆದುಕೊಂಡಿದ್ದೇವೆ. ಕೋರ್ಟಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ನನ್ನ ಬಳಿಯೇ ಇದ್ದವು ಬದಲಾಗಿ ನನ್ನ ತಂದೆಯ ಬಳಿ ಇದ್ದಿರಲಿಲ್ಲ ಎಂದರೆ ಸರಿಯಲ್ಲ.

5 ಮತ್ತು 7 ನೇ ಪ್ರತಿವಾದಿ ಸಲ್ಲಿಸಿದ ಕೌಂಟರ್ ಕ್ಲೇಮು ಕ್ರ.ಸಂ. 1 ರ ಆಸ್ತಿ ನನ್ನ ತಂದೆ ಯಾರಿಗೆ ವಿಲೇವಾರಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಕೌಂಟರ್ ಕ್ಲೇಮು ಕ್ರ.ಸಂ. 2 ರ ಆಸ್ತಿಯನ್ನು ಪಂಚಾಯಿತಿಯವರು ನನ್ನ ಮಗ ವಾದಿಗೆ ಮಂಜೂರು ಮಾಡಿದೆ. ಕೌಂಟರ್ ಕ್ಲೇಮು ಕ್ರ.ಸಂ. 3, 4 ರ ಆಸ್ತಿಗಳನ್ನು ನನ್ನ ತಂದೆ ಯಾರಿಗೂ ವಿಲೇವಾರಿ ಮಾಡಿಲ್ಲ. ಕೌಂಟರ್ ಕ್ಲೇಮು ಕ್ರ.ಸಂ. 5 ರಿಂದ 7 ರ ಆಸ್ತಿಗಳನ್ನು ನನ್ನ ತಂದೆ ನನ್ನ ಮಗ ರುದ್ರೇಶ್ ರವರಿಗೆ ಮರಣ ಶಾಸನ ಬರೆಯುವುದರ ಮೂಲಕ ವಿಲೇವಾರಿ ಮಾಡಿದ್ದಾರೆ. ನನ್ನ ತಂದೆ ಬರೆದಿದ್ದರು ಎನ್ನಲಾದ ಮರಣ ಶಾಸನ ಪತ್ರಗಳನ್ನು ತಯಾರಿಸುವಾಗ ನಾನು ಖುದ್ದು ಹಾಜರು ಇರಲಿಲ್ಲ ಎಂದರೆ ಸರಿ. ಆ ಕಾರಣ ಸದರಿ ಮರಣ ಶಾಸನ ಪತ್ರಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ನನ್ನ ತಂದೆಗೆ ತಾನು ಏನು ಮಾಡುತ್ತಿದ್ದೇನೆಂದು ಗೊತ್ತಾಗುವ ಸ್ಥಿತಿಯಲ್ಲಿ ಇರದೇ ಇದ್ದಾಗ ನಾನು ದಾಖಲೆಗಳ ಮೇಲೆ ನನ್ನ ತಂದೆಯ ಹೆಬ್ಬೆಟ್ಟು ಸಹಿ ಪಡೆದು ಸೃಷ್ಠಿಸಿದ್ದೇವೆಂದರೆ ಸರಿಯಲ್ಲ. ನನ್ನ ತಂದೆಗೆ ತನ್ನ ಎಲ್ಲಾ ಮಕ್ಕಳ ಮೇಲೆ ಪ್ರೀತಿ ವಿಶ್ವಾಸ ಇದ್ದ ಕಾರಣ ಕೇವಲ ವಾದಿಯ ಹೆಸರಿಗೆ ಮಾತ್ರ ತನ್ನ ಆಸ್ತಿಗಳನ್ನು ನೀಡುವ ಉದ್ದೇಶ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದುವವರೆಗೆ ಯಾವುದೇ ಮರಣ ಶಾಸನ ಪತ್ರ ಬರೆಯುವ ಇಚ್ಛೆ ಹೊಂದಿರಲಿಲ್ಲ ಮತ್ತು ಯಾವುದೇ ಮರಣ ಶಾಸನ ಪತ್ರ ಬರೆದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಮರಣ ಶಾಸನ ಪತ್ರಗಳು ನಾನು ಸೃಷ್ಠಿಸಿದ ದಾಖಲೆಗಳು ಎಂದರೆ ಸರಿಯಲ್ಲ. 5 ಮತ್ತು 7 ನೇ ಪ್ರತಿವಾದಿಗಳು ಕೌಂಟರ್

**ಪಿಡಬ್ಲ್ಯೂ: 1**

ಕ್ಲೇಮು ಪರಿಹಾರದಲ್ಲಿ ಕಾಣಿಸಿದ ಆಸ್ತಿಗಳಲ್ಲಿಯೂ ಸಹ ವಾದಿಗಳಿಗೆ ಮತ್ತು ಪ್ರತಿವಾದಿಗಳಿಗೆ ಸಮ ಹಕ್ಕು ಇದೆ ಎಂದರೆ ಸರಿಯಲ್ಲ. ಕೌಂಟರ್ ಕ್ಲೇಮನಲ್ಲಿ ಕಾಣಿಸಿದ ಆಸ್ತಿಗಳಲ್ಲಿಯಾ ಹಿಸ್ಸೆಗಳನ್ನು ಕಬಳಿಸುವ ಉದ್ದೇಶದಿಂದ ನಾನು ದಾಖಲೆಗಳನ್ನು ಸೃಷ್ಟಿಸಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.